ಮಂಗಳವಾರ, 13 ನವೆಂಬರ್ 2018 | ಪುಟಗಳು: 10+4 | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 107
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿತ್ರ



ಎಂ.ಜೆ. ಅಕ್ಬರ್ ಜೆಂಟಲ್‌ಮ್ಯಾನ್: ಮಿ ಟೂ ಆರೋಪದ ಬಗ್ಗೆ ಮಾಜಿ ಸಹೋದ್ಯೋಗಿ ಕೋರ್ಟ್‌ನಲ್ಲಿ ಹೇಳಿಕೆ

ಶಬರಿಮಲೆ ಅಯ್ಯಪ್ಪ ದೇಗುಲದೊಳಗೆ ಮಹಿಳೆಯರ ಪ್ರವೇಶ ವಿವಾದಕ್ಕೆ ಸಂಬಂಧಿಸಿದಂತೆ ಕೇರಳ ಸರಕಾರ ಸರ್ವಪಕ್ಷ ಸಭೆ ಕರೆಯುವ ಸಾಧ್ಯತೆಯಿದೆ.

2020ರ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಲಿರುವ ಅಮೆರಿಕನ್ ಹಿಂದೂ ಸಂಸದೆ ತುಳಸಿ ಗಬ್ಬಾರ್ಡ್?

# ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್ ಉದ್ಘಾಟನೆ



**ಮಂಗಳೂರು:** ಎಲ್ಲ ವೈಜ್ಞಾನಿಕ ವಿಚಾರಗಳು ಪ್ರಕೃತಿಯಿಂದ ಬರುತ್ತವೆ. ನಾವೂ ಪ್ರಕೃತಿ ಜತೆಗೆ ಬೆರೆತು ಪ್ರಕೃತಿಯ ಭಾಷೆಯನ್ನು ಅರಿತುಕೊಳ್ಳಬೇಕು ಎಂದು ವಿಟಿಯು ವೈಸ್ ಚಾನ್ಸಲರ್ ಡಾ. ಕರಿಸಿದ್ದಪ್ಪ ಹೇಳಿದರು.

ಅವರು ಶನಿವಾರ ಮಂಗಳೂರು ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಹಾಗೂ ಮ್ಯಾನೇಜ್ಮೆಂಟ್ ವತಿಯಿಂದ ಪಿಯುಸಿ ಹಾಗೂ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ನಡೆದ ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಐಇಟಿಇ ಅಧ್ಯಕ್ಷ ಡಾ.ಕೆ.ಟಿ.ವಿ.ರೆಡ್ಡಿ, ಸೆಂಟ್ರಲ್ ಪವರ್ ರಿಸರ್ಚ್ ಇನ್‌ಸ್ಟಿಟ್ಯೂಟ್ ವಿಜ್ಞಾನಿ ಡಾ.ಎಸ್. ಸೀತಾರಾಮು, ಟ್ರಯಾನ್ನ ಮುಖ್ಯ ಜ್ಞಾನ ಅಧಿಕಾರಿ ವೇದ್ ಪ್ರಕಾಶ್, ಸಿದ್ಧಾರ್ಥ್ ರಾಜಹನ್ಸ್, ಆಕರ್ಶ್ ನಾಯ್ಡು ಸಿ.ನಾಗರಾಜ್, ರೂಮ್ ಇಂಡಿಯಾ ಸಹ-ಸಂಸ್ಥಾಪಕ ಪ್ರಣವ್ ಹೆಬ್ಬಾರ್, ಸಹ್ಯಾದ್ರಿ ಗ್ರೂಪ್ ನಿರ್ದೇಶಕ ಡಾ.ಎಲ್.ಎಲ್.ಪ್ರಭಾಕರ, ಅಧ್ಯಕ್ಷ ಮಂಜುನಾಥ್ ಭಂಡಾರಿ, ಆರ್ ಅ್ಯಂಡ್ ಡಿ ನಿರ್ದೇಶಕ ಡಾ.ಮಂಜಪ್ಪ ಸಾರಥಿ, ಪ್ರಿನ್ಸಿಪಾಲ್ ಡಾ.ಆರ್.ಶ್ರೀನಿವಾಸ ರಾವ್ ಕುಂಟೆ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಲಭ್ಯವಿರುವ ಡಿಜಿಟಲ್ ಸಂಪನ್ಮೂಲಗಳನ್ನು ಹೇಗೆ ಹತೋಟಿಗೊಳಿಸುವುದು ಎಂಬ ವಿಷಯದ ಕುರಿತು ಸಂವಾದ ಕಾರ್ಯಕ್ರಮ ನಡೆಯಿತು.

ಸಿದ್ಧಾರ್ಥ್ ರಾಜಹನ್ಸ್, ಪ್ರಣವ್ ಹೆಬ್ಬಾರ್, ವೇದ್ ಪ್ರಕಾಶ್ ಪ್ಯಾನೆಲಿಸ್ಟರಾಗಿದ್ದರು. ಆಕರ್ಶ್ ನಾಯ್ಡು ಸಮಿತಿ ಚರ್ಚೆಯ ಮಾಡರೇಟರ್ ಆಗಿದ್ದರು. ಬಳಿಕ ಟಾಲೆಂಟ್ ಹಂಟ್‌ಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.